**ಚಿತ್ರ ೨ :** ಈ ಚಿತ್ರ ಕೂಡ ೧೮೮೪ರ ಆದಿಭಾಗದಲ್ಲಿಯೇ ತೆಗೆದದ್ದು. ನರೇಂದ್ರನ ತಂದೆ ತೀರಿಕೊಂಡು, ಅವನ ಸಂಸಾರ ನಿರ್ಗತಿಕವಾಗಿದ್ದ ಸಂದರ್ಭ. ವಿದ್ಯೆ, ಬುದ್ಧಿ, ತೇಜಸ್ಸು ಮತ್ತು ಪರಾಕ್ರಮಗಳಿಂದ ತುಂಬಿತುಳುಕಾಡುತ್ತಿದ್ದ ನರೇಂದ್ರನಂತಹ ಅಸಾಧಾರಣ ತರುಣನಿಗೆ ಒಂದು ಕೆಲಸ ಸಿಗದೇ ಹೋಗಬೇಕಾದರೆ ಅದು ಭಗವಂತನ ಲೀಲೆಯೆನ್ನದೆ ಇನ್ನೇನು! ಆಗೊಂದು ದಿನ ಶ್ರೀರಾಮಕೃಷ್ಣರು ಒಬ್ಬ ಶ್ರೀಮಂತನಿಗೆ, "ನೋಡು, ನರೇಂದ್ರನ ಮನೆಯವರು ಬಹಳ ಕಷ್ಟದಲ್ಲಿದ್ದಾರೆ. ಅವನ ಸ್ನೇಹಿತರು ಈಗ ಅವನಿಗೆ ಏನಾದರೂ ಸಹಾಯ ಮಾಡಲು ಸಾಧ್ಯವಾದರೆ ಒಳ್ಳೆಯದು" ಎಂದು ಹೇಳಿದರು. ನರೇಂದ್ರ ಆಗ ಅಲ್ಲೇ ಇದ್ದನಾದರೂ ಏನೂ ಮಾತನಾಡಲಿಲ್ಲ; ಆ ಶ್ರೀಮಂತ ಹೋದ ಮೇಲೆ ಅಸಮಾಧಾನದಿಂದ, "ಮಹಾಶಯರೇ, ನೀವು ಅದನ್ನೆಲ್ಲ ಅವರ ಹತ್ತಿರ ಏಕೆ ಹೇಳಬೇಕಾಗಿತ್ತು?" ಎಂದ. ಅವನ ಮಾತಿನಲ್ಲಿ ತನ್ನ ಸ್ವಾಭಿಮಾನಕ್ಕೆ ಮತ್ತು ಮನೆತನದ ಗೌರವಕ್ಕೆ ಧಕ್ಕೆಯಾಯಿತು ಎಂಬ ಬೇಸರ ವ್ಯಕ್ತವಾಗಿತ್ತು. ಆಗ ಶ್ರೀರಾಮಕೃಷ್ಣರು ಕಂಬನಿದುಂಬಿ ನುಡಿದರು, "ಓ ನರೇನ್, ನಿನಗೋಸ್ಕರ ನಾನು ಏನು ಬೇಕಾದರೂ ಮಾಡಲು ಸಿದ್ಧ. ಬೇಕೆಂದರೆ ನಿನಗಾಗಿ ನಾನು ಮನೆಮನೆಗೆ ಹೋಗಿ ಭಿಕ್ಷೆ ಬೇಡಿಯೇನು!" ಇದನ್ನು ಕೇಳಿದಾಗ ನರೇಂದ್ರನಿಗೆ ಕಣ್ಣೀರು ಉಕ್ಕಿ ಬಂತು. ಶ್ರೀರಾಮಕೃಷ್ಣರ ನಿಷ್ಕಾಮಪ್ರೇಮಕ್ಕಿಂತಲೂ ನರೇಂದ್ರನ ಸ್ವಾಭಿಮಾನ ಹೆಚ್ಚೆ? ಆದ್ದರಿಂದಲೇ ಮುಂದೆ ಸ್ವಾಮೀಜಿ ಹೀಗೆ ಹೇಳುತ್ತಾರೆ: "ಶ್ರೀರಾಮಕೃಷ್ಣರು ತಮ್ಮ ಅಪಾರ ಪ್ರೀತಿಯಿಂದ ನನ್ನನ್ನು ತಮ್ಮ ದಾಸನನ್ನಾಗಿ ಮಾಡಿಕೊಂಡುಬಿಟ್ಟರು"



ಪುಸ್ತಕ ಪರಿಚಯ

# ಶ್ರೀರಾಮಕೃಷ್ಣಮಯ ಮಾಸ್ಟರ್ ಮಹಾಶಯ




**ಲೇಖಕರು :** ಸಂಧ್ಯಾ; **ಪ್ರಕಾಶಕರು :** ಶ್ರೀನುಡಿ ಪ್ರಕಾಶನ, ರಾಮಕೃಷ್ಣ ವಿವೇಕಾನಂದ ಆಶ್ರಮ, ಹುಬ್ಬಳ್ಳಿ

**ಪುಟಗಳು :** 439 ; **ಬೆಲೆ :** ರೂ. 150/–

ರಾಮಕೃಷ್ಣ ಭಕ್ತವೃಂದಕ್ಕೆ ಮಹೇಂದ್ರನಾಥ ಗುಪ್ತ ಅವರು, 'ಮಾಸ್ಟರ್ ಮಹಾಶಯ' ಅಥವಾ 'ಮ' ಎಂಬ ಹೆಸರಿನಿಂದಲೇ ಪ್ರಖ್ಯಾತರಾಗಿದ್ದಾರೆ. ಶ್ರೀರಾಮಕೃಷ್ಣರ ಸಾಕ್ಷಾತ್ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಶಿವಾನಂದಜಿ ಅವರು "ಶ್ರೀ 'ಮ' ನಿಜಕ್ಕೂ ಒಬ್ಬ ಅಸಾಧಾರಣ ವ್ಯಕ್ತಿ. ಅವರು ಶ್ರೀರಾಮಕೃಷ್ಣಾವತಾರದ ವೇದವ್ಯಾಸರು" ಎಂದು ಕರೆಯುತ್ತಾರೆ. ಅವರು ರಚಿಸಿದ 'ಶ್ರೀರಾಮಕೃಷ್ಣ ವಚನವೇದ', ಶ್ರೀ ಕುವೆಂಪು ಹೇಳುವಂತೆ, "ಕರತಲ ದೇವಸ್ಥಾನ, ಕರತಲ ತಪೋರಂಗ, ಕರತಲ ಪುಣ್ಯಕ್ಷೇತ್ರ." "ನಿಮಗೆ ಒಂದೇ ಮಾತಿನಲ್ಲಿ ಬ್ರಹ್ಮಜ್ಞಾನವನ್ನು ಪಡೆದುಕೊಳ್ಳುವ ಉಪಾಯವನ್ನು ಹೇಳಿಕೊಡುತ್ತೇನೆ. ಪ್ರತಿದಿನ 'ಕಥಾಮೃತ'ವನ್ನು ಓದಿ" ಎಂದು ಸ್ವಾಮಿ ಬ್ರಹ್ಮಾನಂದಜಿ ಹೇಳುತ್ತಾರೆ. ಇಂತಹ ಪುಣ್ಯಗ್ರಂಥವನ್ನು ರಚಿಸಿದ ಮಾಸ್ಟರ್ ಮಹಾಶಯರೂ ಒಬ್ಬ ಮಹಾತ್ಮರೇ. ಅವರ ವಿಸ್ತೃತ ಜೀವನ ಇದುವರೆಗೆ ಕನ್ನಡದ ಓದುಗರಿಗೆ ಸಿಗುತ್ತಿರಲಿಲ್ಲ. ಅದು ಇಂದು ಈ ಬೃಹದ್ ಗ್ರಂಥದ ರೂಪದಲ್ಲಿ ಲಭ್ಯವಾಗಿದೆ. ಹುಬ್ಬಳ್ಳಿಯ ರಾಮಕೃಷ್ಣ–ವಿವೇಕಾನಂದ ಆಶ್ರಮವು 'ಶ್ರೀನುಡಿ' ಎನ್ನುವ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಅದರಲ್ಲಿ ಪ್ರತಿತಿಂಗಳೂ 'ಮಹಾನಂದದಾಯಕ ಮಾಸ್ಟರ್ ಮಹಾಶಯ' ಎನ್ನುವ ಶೀರ್ಷಿಕೆಯಲ್ಲಿ ಮಹೇಂದ್ರನಾಥ ಗುಪ್ತರ ಜೀವನಚರಿತ್ರೆ ಪ್ರಕಟವಾಗುತ್ತಿತ್ತು. ಆಶ್ರಮದ ಭಕ್ತರಾದ ಸಂಧ್ಯಾ ಅವರು ಇದನ್ನು ಬರೆಯುತ್ತಿದ್ದರು. ಈಗ ಇದು ದೊಡ್ಡ ಕೃತಿಯಾಗಿ ಹೊರಬಂದಿರುವುದು ತುಂಬ ಅಭಿಮಾನದ ಸಂಗತಿ. ಶೈಲಿ ಸರಳವಾಗಿದ್ದರೂ, ವಿಷಯದ ಗಹನತೆ ಮತ್ತು ಗಾಂಭೀರ್ಯಗಳು ಈ ಕೃತಿಯಲ್ಲಿ ಎದ್ದುಕಾಣುತ್ತವೆ. ಅದಕ್ಕೆ ಒಂದು ಸುಂದರವಾದ ಉದಾಹರಣೆಯನ್ನು ನೀಡಬಹುದು:

"ತನ್ನ ಆತ್ಮದ ಆತ್ಮವಾದ ಶ್ರೀರಾಮಕೃಷ್ಣರು ಚರ್ಮಚಕ್ಷುಸ್ಸಿಗೆ ನಿಲುಕದೆ ಹೋದ ಈ ಸಂದರ್ಭದಲ್ಲಿ ಮಾಸ್ಟರನ ಪ್ರತಿಯೊಂದು ಚಟುವಟಿಕೆಯೂ ಒಂದೇ ಉದ್ದೇಶದತ್ತ ಕೇಂದ್ರೀಕೃತವಾಗಿತ್ತು – ಸರ್ವಪ್ರಯತ್ನದಿಂದ ತನ್ನೆದೆಯ ಗುಡಿಯೊಳಗೆ ಅವರ ದಿವ್ಯಮಂಗಳ ಮೂರ್ತಿಯನ್ನು ಶಾಶ್ವತವಾಗಿ ಪ್ರತಿಷ್ಠಾಪಿಸಿಕೊಂಡು, ಅನುದಿನ, ಪ್ರತಿಕ್ಷಣ, ಅವರ ಭಾವದಲ್ಲೇ ತನ್ಮಯನಾಗಿ ಬಾಳು ನಡೆಸುವುದು. ಇದಕ್ಕಾಗಿ ಅವನು ಮಾಡದ ಪ್ರಯತ್ನವಿಲ್ಲ, ಪಡದ ಶ್ರಮವಿಲ್ಲ! ಗುರುವಿನ ಶರೀರ ಕಣ್ಮರೆಯಾದರೂ, ಅವರು ಬೋಧಿಸಿದ ಜೀವನಕ್ರಮದಿಂದ ವಿಚಲಿತನಾಗದೆ, ಗೃಹಸ್ಥಾಶ್ರಮದಲ್ಲಿದ್ದೂ ಕೂಡ ಭೋಗವಸ್ತುಗಳಿಗೆ ವಶನಾಗದೆ ಆದರ್ಶಕ್ಕಾಗಿಯೇ ಬದುಕಿದ ಅವನ ಗುರುಭಕ್ತಿ ಸಾಧಕವರ್ಗಕ್ಕೊಂದು ಮಾದರಿ" (ಪುಟ 119).

ಕಾವ್ಯಮಯ ಶೈಲಿ, ಆಧ್ಯಾತ್ಮಿಕ ಗಾಂಭೀರ್ಯತೆ, ಶ್ರದ್ಧಾಭಕ್ತಿಗಳು ವ್ಯಕ್ತವಾಗಿರುವ ಭಾವನೆ – ಇವೆಲ್ಲವನ್ನೂ ಮೇಲಿನ ಭಾಗದಲ್ಲಿ ಕಾಣಬಹುದಲ್ಲವೇ! ಇದೇ ರೀತಿಯ ಭಾಷಾಶೈಲಿಯನ್ನು ಪುಸ್ತಕದ ಉದ್ದಕ್ಕೂ ನಾವು ಕಾಣಬಹುದು. ಹೀಗಾಗಿ ಈ ಗ್ರಂಥದ ಅಧ್ಯಯನ ಮನಸ್ಸಿಗೂ, ಹೃದಯಕ್ಕೂ ಹಿತವೆನಿಸುವುದಲ್ಲದೆ, ಆತ್ಮಸಂತೃಪ್ತಿಯನ್ನೂ ತಂದುಕೊಡುತ್ತದೆ. ಶ್ರೀರಾಮಕೃಷ್ಣಮಯವಾಗಿದ್ದ ಮಾಸ್ಟರ್ ಮಹಾಶಯನ ಜೀವನ ಚರಿತ್ರೆ ಕನ್ನಡದಲ್ಲಿ ಸಮಗ್ರವಾಗಿ, ಅಚ್ಚುಕಟ್ಟಾಗಿ ಬಂದಿರುವುದು ಇದೇ ಮೊದಲು. ದಪ್ಪನಾದ ಆಕರ್ಷಕ ರಕ್ಷಾಕವಚ, ಸುಂದರ ಮ್ಯಾಪ್ಲಿತೋ ಕಾಗದದಲ್ಲಿ ಅಂದವಾದ, ತಪ್ಪಿಲ್ಲದ ಮುದ್ರಣ, ವೃದ್ಧರೂ ಓದಲು ಅನುಕೂಲವಾಗುವಂತೆ ದೊಡ್ಡ ದೊಡ್ಡ ಸ್ಫುಟವಾದ ಅಕ್ಷರಗಳು – ಈ ಗ್ರಂಥದ ಕಾಂತಿಯನ್ನು ಹೆಚ್ಚಿಸಿವೆ. ಒಟ್ಟಿನಲ್ಲಿ ಮಹಾಮಹಿಮನಾದ ಮಾಸ್ಟರ್ ಮಹಾಶಯನ ಜೀವನದ ಅಧ್ಯಯನ, ಕೇವಲ ಬರಿಯ ಓದು ಮಾತ್ರವಲ್ಲ, ಆನಂದಪೂರಿತ ಧ್ಯಾನ. ಅದಕ್ಕೆ ಉತ್ತಮ ಸಾಧನ ಈ ಪುಣ್ಯಗ್ರಂಥ. – ವಿಪ್ರ



# ನವಯುಗದ ನೂತನ ಮಾನವ : ಶ್ರೀರಾಮಕೃಷ್ಣ

ಸ್ವಾಮಿ ಭಜನಾನಂದ

(ಹಿಂದಿನ ಸಂಚಿಕೆಯಿಂದ)

## ಶ್ರೀರಾಮಕೃಷ್ಣರ ಅವತಾರದ ಮಹತ್ವ

ಸ್ವಾಮಿ ವಿವೇಕಾನಂದರ ಮುಂದಿದ್ದ ಬಹುಮುಖ್ಯವಾದ ಕಾರ್ಯ ಯಾವುದು? ಶ್ರೀರಾಮಕೃಷ್ಣರ ಮಹಾನ್ ಜೀವನದ ನಿಜವಾದ ಮಹತ್ವವನ್ನು ಮತ್ತು ಪ್ರಾಮುಖ್ಯತೆಯನ್ನು ಪ್ರತಿಪಾದಿಸುವುದು.

ಕೇವಲ ಶ್ರೀರಾಮಕೃಷ್ಣರ ಅವತಾರದ ಮಹತ್ವವನ್ನು ಮಾತ್ರವೇ ಪ್ರತ್ಯೇಕವಾಗಿ ಪರಿಗಣಿಸಲಾಗದು. ಇತರ ಅವತಾರಪುರುಷರ, ಪ್ರವಾದಿಗಳ ಮತ್ತು ಜಗದ್ಗುರುಗಳ ಜೀವನ ಮತ್ತು ಕಾರ್ಯಗಳ ಬೆಳಕಿನಲ್ಲಿಯೇ ಇದನ್ನು ಅರ್ಥಮಾಡಿಕೊಳ್ಳಬೇಕು. ಒಬ್ಬ ಅವತಾರಪುರುಷನ ಅಥವಾ ಜಗದ್ಗುರುವಿನ ದಿವ್ಯಕಾರ್ಯವಾದರೂ ಏನು? ಮಾನವ ಸಂಸ್ಕೃತಿಯ ಪ್ರಗತಿ, ಇಡೀ ಮಾನವ ಜನಾಂಗದ ಆಧ್ಯಾತ್ಮಿಕ ಅಭ್ಯುತ್ಥಾನ, ಮಾನವಕಲ್ಯಾಣದ ಸರ್ವತೋಮುಖ ಅಭಿವೃದ್ಧಿ, ವ್ಯಕ್ತಿ ವ್ಯಕ್ತಿಗಳ ನಡುವೆ ಶಾಂತಿ, ಏಕತೆ ಮತ್ತು ಪ್ರೀತಿಗಳ ಬೆಳವಣಿಗೆ – ಇವುಗಳಲ್ಲಿ ಅವತಾರಪುರುಷನು ವಹಿಸುವ ಪಾತ್ರವಾದರೂ ಏನು? ಈ ಹತ್ತು ಹಲವು ವಿಷಯಗಳಲ್ಲಿ ಕೆಲವನ್ನು ಇಲ್ಲಿ ಸಂಕ್ಷೇಪವಾಗಿ ವಿಚಾರ ಮಾಡೋಣ.

**ಕಪಾಲಮೋಚಕರಾಗಿ ಅವತಾರಪುರುಷರು:** ಪ್ರಶ್ನೋತ್ತರದ ಸಂದರ್ಭವೊಂದರಲ್ಲಿ ಸ್ವಾಮಿ ವಿವೇಕಾನಂದರಿಗೆ ಒಬ್ಬರು ಈ ಪ್ರಶ್ನೆಯನ್ನು ಕೇಳಿದರು: "ಮಾನವರೂಪವನ್ನು ತಳೆದಾಗ, ಭಗವಂತನನ್ನು ಗುರುತಿಸುವುದಾದರೂ ಹೇಗೆ?" ಸ್ವಾಮೀಜಿ ಅದಕ್ಕೆ ಹೀಗೆ ಉತ್ತರವಿತ್ತರು: "ಜನರ ಅದೃಷ್ಟವನ್ನು ಬದಲಾಯಿಸಬಲ್ಲವನೇ ಭಗವಂತ. ಒಬ್ಬ ಸಾಧುವು ಆಧ್ಯಾತ್ಮಿಕ ಮಾರ್ಗದಲ್ಲಿ ಎಷ್ಟೇ ಮುಂದುವರಿದಿದ್ದರೂ ಕೂಡ, ಈ ವಿಶಿಷ್ಟ ಸ್ಥಾನವನ್ನು ಗಳಿಸಿಕೊಳ್ಳಲಾರನು. ಅವತಾರಪುರುಷರೆಂದರೆ ಕಪಾಲಮೋಚಕರು; ಅಂದರೆ ಜನರ ಅದೃಷ್ಟವನ್ನೇ ಪರಿವರ್ತಿಸಬಲ್ಲಂಥವರು."

'ಜನರ ಅದೃಷ್ಟ' ಎಂದು ಸ್ವಾಮೀಜಿ ಹೇಳುವುದರಲ್ಲಿನ ಅಂತರಾರ್ಥವೇನು? ಸ್ವಾಮೀಜಿಯವರ ದೃಷ್ಟಿಯಲ್ಲಿ 'ಅದೃಷ್ಟ' ಎಂದರೆ ಒಬ್ಬ ಮನುಷ್ಯನ ಭವಿಷ್ಯ, ಅವನ ಮುಂದಿನ ಜೀವನ. ಭಾರತೀಯ ಧರ್ಮಗಳಲ್ಲಿ ಇರುವ ನಂಬಿಕೆಯ ಪ್ರಕಾರ, ವ್ಯಕ್ತಿಯೊಬ್ಬನ ಭವಿಷ್ಯ ನಿರ್ಧಾರಿತವಾಗುವುದು ಅವನ ಕರ್ಮದಿಂದ. ಪ್ರತಿಯೊಂದು ಒಳ್ಳೆಯ ಮತ್ತು ಕೆಟ್ಟ ಕರ್ಮ ಈ ಪ್ರಪಂಚದಲ್ಲಿ ಭೌತಿಕವಾದ ಪರಿಣಾಮವನ್ನು ಉಂಟುಮಾಡುವುದೇನೋ ಸರಿಯೇ. ಹಾಗೆಯೇ ಅದು ಕಣ್ಣಿಗೆ ಕಾಣಿಸದ ವಿಶ್ವಪರಿಣಾಮವನ್ನೂ ಉಂಟುಮಾಡುತ್ತದೆ. ಇದನ್ನು 'ಕರ್ಮಶೇಷ' ಅಥವಾ 'ಸಂಚಿತಕರ್ಮ' ಎಂದು ಕರೆಯುತ್ತಾರೆ. ತನ್ನ ಯೋಗಸೂತ್ರಗಳಲ್ಲಿ ಪತಂಜಲಿಯು ಇದನ್ನು 'ಕರ್ಮಾಶಯ' ಎಂದು ಹೆಸರಿಸುತ್ತಾನೆ. ಇದು 'ಅದೃಷ್ಟ' ಅಂದರೆ ನೋಡಲಾಗದ್ದು. ಸಂಚಿತ ಕರ್ಮವು ಎಲ್ಲಿ ಶೇಖರವಾಗಿದೆ ಎಂಬುದನ್ನು ಯಾರೂ ತಿಳಿಯಲು ಸಾಧ್ಯವಿಲ್ಲ ಎಂದು ಇದರ ಅರ್ಥ. ಅದು **ಲಲಾಟ** ಅಥವಾ **ಕಪಾಲ** – ಅಂದರೆ ಹಣೆಯ ಮೇಲೆ ಬರೆದಿದೆ ಎನ್ನುವುದು ಜನಸಾಮಾನ್ಯರಲ್ಲಿ ಪ್ರಸಿದ್ಧವಾಗಿರುವ ನಂಬಿಕೆ. ಈ ಕರ್ಮಾಶಯವು ಒಬ್ಬ ವ್ಯಕ್ತಿಯ ಬುದ್ಧಿಯಲ್ಲಿ ಶೇಖರವಾಗಿದೆ ಎಂದು ಪತಂಜಲಿಯ ಯೋಗಸೂತ್ರಗಳಿಗೆ ಭಾಷ್ಯವನ್ನು ಬರೆದಿರುವ ವ್ಯಾಸ ಮಹರ್ಷಿಗಳು ಹೇಳುತ್ತಾರೆ. ಇದು ಸಂಚಿತ ಕರ್ಮದ ವಿಪಾಕ ಅಥವಾ ಫಲಸ್ವರೂಪವಾಗಿದೆ. ಇದೇ ಜನ್ಮಾಂತರವನ್ನು ಉಂಟುಮಾಡುತ್ತದೆ. ಮುಂದಿನ ಜನ್ಮದಲ್ಲಿ ಇದು ಪ್ರಾರಬ್ಧ ಕರ್ಮದ ರೂಪದಲ್ಲಿ ಮರಳಿ ಬರುತ್ತದೆ ಹಾಗೂ ಮನುಷ್ಯನ ಜನನ, ಮರಣ, ಅನುಭವಗಳು ಮತ್ತು ಬಾಳಿನ ವಿವಿಧ ಪರಿಸ್ಥಿತಿಗಳಿಗೆ ಕಾರಣವಾಗುತ್ತದೆ. ಇದನ್ನೇ 'ಭವಿಷ್ಯ' ಅಥವಾ 'ಅದೃಷ್ಟ' ಎಂದು ಸಾಮಾನ್ಯ ಭಾಷೆಯಲ್ಲಿ ಕರೆಯುವುದು. ಜನರಲ್ಲಿ ಇರುವ ಪ್ರತೀತಿಯ ಪ್ರಕಾರ, ಒಮ್ಮೆ ಈ ಸಂಚಿತ ಕರ್ಮವು ಶೇಖರವಾದರೆ, ಅದನ್ನು ಬದಲಾಯಿಸಲಾಗಲಿ ಅಥವಾ ಅದು ಫಲವನ್ನು ಕೊಡುವುದನ್ನು ತಡೆಯುವುದಾಗಲಿ ಯಾರಿಂದಲೂ ಸಾಧ್ಯವಿಲ್ಲ. ಅದು ತನ್ನ ಫಲವನ್ನು ನೀಡಿಯೇ ನೀಡುತ್ತದೆ ಮತ್ತು ಪುನರ್ಜನ್ಮವನ್ನು ಉಂಟುಮಾಡಿಯೇ ಮಾಡುತ್ತದೆ.

ಹಿಂದೂಗಳ ನಂಬಿಕೆಯ ಪ್ರಕಾರ, ಭಗವಂತ ಅಥವಾ ಅವತಾರಪುರುಷ ಮಾತ್ರವೇ ಒಬ್ಬ ವ್ಯಕ್ತಿಯ ಸಂಚಿತ ಕರ್ಮವನ್ನು ನಾಶಮಾಡಲು ಸಾಧ್ಯ. ಹೀಗಾದಾಗ, ಆ ವ್ಯಕ್ತಿ ಮತ್ತೆ ಹುಟ್ಟಿಬರುವುದಿಲ್ಲ; ಜನನ–ಮರಣರೂಪದ ಸಂಸಾರಚಕ್ರದಿಂದ ಬಿಡುಗಡೆ ಪಡೆಯುತ್ತಾನೆ. ಈಗಾಗಲೇ ಜನ್ಮತಳೆದ ವ್ಯಕ್ತಿಯ ವಿಷಯದಲ್ಲಿ, ಈಶ್ವರ ಅಥವಾ ಅವತಾರಪುರುಷರು ಆತನ ಪ್ರಾರಬ್ಧಕರ್ಮದ ಗತಿಯನ್ನೇ ಪರಿವರ್ತಿಸಬಲ್ಲರು ಅಥವಾ ಬದಲಾಯಿಸಬಲ್ಲರು. ಇದರರ್ಥ, ಒಬ್ಬ ವ್ಯಕ್ತಿ ಕಷ್ಟಪಡಬೇಕಾದ ಸಂದರ್ಭ ಇದ್ದರೆ, ಭಗವಂತ ಮಾತ್ರವೇ ಅದನ್ನು ಕಡಮೆ ಮಾಡಬಹುದು ಅಥವಾ ತಡೆಯಬಹುದು. ಈ ಕಾರಣಕ್ಕಾಗಿಯೇ ಅವತಾರಪುರುಷರನ್ನು 'ಕಪಾಲಮೋಚಕರು' ಎಂದು ಸ್ವಾಮಿ ವಿವೇಕಾನಂದರು ಕರೆಯುತ್ತಾರೆ. ಇದರ ಅರ್ಥ, 'ಬೇರೊಬ್ಬ ವ್ಯಕ್ತಿಯ ಅದೃಷ್ಟವನ್ನೇ ಬದಲಾಯಿಸಬಲ್ಲವರು' ಎಂದು.

ಮುಕ್ತಿ ಎಂದರೆ ಸಂಸಾರಚಕ್ರದ ಬಂಧನದಿಂದ ಬಿಡುಗಡೆ ಹೊಂದುವುದು ಎಂದರ್ಥ. ಕೇವಲ ಈಶ್ವರ ಅಥವಾ ಅವತಾರ ಪುರುಷ ಮಾತ್ರವೇ ಈ ಮುಕ್ತಿಯನ್ನು ನೀಡಬಲ್ಲ ಎಂದು ಎಲ್ಲ ಭಕ್ತಿಪಂಥಗಳೂ ಪ್ರತಿಪಾದಿಸುತ್ತವೆ. ಇದು 'ವಿಮೋಚನೆ' (Salvation) ಎನ್ನುವ ಕ್ರೈಸ್ತ ಪರಿಕಲ್ಪನೆಗೆ ಸಮಾನವಾಗಿದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೀಗೆ ಸಾರುತ್ತಾನೆ: "ಯಾರು ಎಲ್ಲ ಕರ್ಮಗಳನ್ನೂ ನನ್ನಲ್ಲಿ ಸಮರ್ಪಿಸಿ, ನನ್ನನ್ನೇ ಧ್ಯೇಯವಾಗಿ ಇಟ್ಟುಕೊಂಡು, ನನ್ನಲ್ಲಿಯೇ ಮನಸ್ಸನ್ನು ನೆಲೆಸಿ, ಅನನ್ಯವಾದ ಯೋಗದಿಂದ ನನ್ನನ್ನು ಧ್ಯಾನಿಸುತ್ತಾ, ಆರಾಧಿಸುತ್ತಾರೆಯೋ ಅವರನ್ನು ನಾನು ಮೃತ್ಯುರೂಪವಾದ ಸಂಸಾರಸಾಗರದಿಂದ ಪಾರುಮಾಡುತ್ತೇನೆ" (ಗೀತಾ, ೧೨:೬–೭). ಹಾಗೆಯೇ ಶ್ರೀಕೃಷ್ಣನು ಈ ಆಶ್ವಾಸನೆಯನ್ನೂ ನೀಡುತ್ತಾನೆ: "ಎಲ್ಲ ಧರ್ಮಗಳನ್ನೂ ಪರಿತ್ಯಜಿಸಿ ನನ್ನಲ್ಲಿಯೇ ಶರಣಾಗು. ನಾನು ನಿನ್ನನ್ನು ಎಲ್ಲ ಪಾಪಗಳಿಂದಲೂ ಬಿಡಿಸುತ್ತೇನೆ, ಶೋಕಿಸದಿರು" (ಗೀತಾ, ೧೮:೬೬). ಏಸುಕ್ರಿಸ್ತನೂ ಇದೇ ರೀತಿಯ ಆಶ್ವಾಸನೆಯನ್ನು ತನ್ನ ಅನುಯಾಯಿಗಳಿಗೆ ನೀಡುತ್ತಾನೆ: "ಯಾರು ಸಂಕಷ್ಟದಲ್ಲಿ ಇರುವಿರೋ, ಭಾರದಿಂದ ಬಳಲುತ್ತಿರುವಿರೋ – ಅವರೆಲ್ಲ ನನ್ನ ಬಳಿ ಬನ್ನಿರಿ. ನಾನು ನಿಮಗೆ ವಿಶ್ರಾಂತಿಯನ್ನು ನೀಡುತ್ತೇನೆ." ಈ ಬಗೆಯ ದಿವ್ಯ ಸಾಂತ್ವನವನ್ನು ಕೇವಲ ಅವತಾರಪುರುಷರು ಮಾತ್ರ ನೀಡಬಲ್ಲರು.

ಸ್ವಾಮಿ ವಿವೇಕಾನಂದರ ಪ್ರಕಾರ, ಆತ್ಯಂತಿಕ ಮುಕ್ತಿಯನ್ನು ನೀಡುವ ಈ ಶಕ್ತಿಯೇ ಅವತಾರದ ಮುಖ್ಯ ಲಕ್ಷಣ. ಶ್ರೀರಾಮಕೃಷ್ಣರು ಇಂತಹ ಶಕ್ತಿಯನ್ನು ಹೊಂದಿದ್ದಾರೆ ಎಂಬ ಶ್ರದ್ಧೆ ಸ್ವಾಮೀಜಿಯವರಲ್ಲಿ ಇತ್ತು. ಈ ಶ್ರದ್ಧೆಯೇ, ಶ್ರೀರಾಮಕೃಷ್ಣರು ವರ್ತಮಾನ ಕಾಲದ ಅವತಾರ ಎಂದು ಒಪ್ಪಿಕೊಳ್ಳಲು ಮತ್ತು ಘೋಷಿಸಲು ಅವರಿಗೆ ಅನುವು ಮಾಡಿಕೊಟ್ಟಿತು. ಸ್ವಾಮೀಜಿ, ತಾವು ರಚಿಸಿರುವ ಶ್ರೀರಾಮಕೃಷ್ಣರ ಸಂಧ್ಯಾರತಿಯ ಗಾನದ ಆರಂಭದಲ್ಲಿಯೇ ಈ ಭಾವನೆಯನ್ನು ಹೀಗೆ ವ್ಯಕ್ತಪಡಿಸುತ್ತಾರೆ: **ಖಂಡನ ಭವಬಂಧನ.... ವಂದಿ ತೋಮಾಯ್** – "ಭವಬಂಧನವನ್ನು ಖಂಡಿಸುವವನೇ, ನಿನ್ನನ್ನು ನಾವು ವಂದಿಸುತ್ತೇವೆ."

ಅವತಾರವು ಜೀವಿಗಳ ಬಂಧನವನ್ನು ಛಿದ್ರಗೊಳಿಸುವುದಾದರೂ ಹೇಗೆ? ಅದೇ ಸಂಧ್ಯಾರತಿಯ ಗಾನದ ಕೊನೆಯ ಎರಡು ಸಾಲುಗಳಲ್ಲಿ ಸ್ವಾಮೀಜಿ ಇದರ ಬಗ್ಗೆ ಸೂಚನೆ ಕೊಡುತ್ತಾರೆ: **ಜ್ಯೋತಿರ ಜ್ಯೋತಿ ಉಜಲ ಹೃದಿಕಂದರ, ತುಮಿ ತಮೊ ಭಂಜನಹಾರ್** – "ಜ್ಯೋತಿಗಳಿಗೂ ಜ್ಯೋತಿಸ್ವರೂಪನಾದ ನೀನು ಹೃದಯಗುಹೆಯನ್ನು ಉಜ್ವಲವಾಗಿ ಬೆಳಗಿಸುತ್ತಾ, ಅಲ್ಲಿರುವ ಅಜ್ಞಾನದ ಕತ್ತಲೆಯನ್ನು ನಾಶಮಾಡುತ್ತೀಯೆ." ಸಂಸಾರದ ಬಂಧಗಳೆಂದರೆ ಅವು ಹಗ್ಗದ ಹಾಗೇನೂ ಇರುವುದಿಲ್ಲ. ಅವು ಅಜ್ಞಾನದ ವಿವಿಧ ರೂಪಗಳು. ಅವತಾರಪುರುಷನು ಹೃದಯಾಂತರಂಗದಲ್ಲಿ ಜ್ಞಾನದ ಬೆಳಕನ್ನು ಹೊತ್ತಿಸುತ್ತಾನೆ. ಆ ಮೂಲಕ ಅಲ್ಲಿ ಕವಿದಿರುವ ಅಜ್ಞಾನದ ಅಂಧಕಾರವನ್ನು ಕಳೆಯುತ್ತಾನೆ. ಶ್ರೀಕೃಷ್ಣನೂ ಭಗವದ್ಗೀತೆಯಲ್ಲಿ ಇದನ್ನೇ ಹೀಗೆ ಹೇಳುತ್ತಾನೆ: "ಅವರ (ಭಕ್ತರ) ಮೇಲಿನ ಅನುಕಂಪೆಯಿಂದಲೇ, ಅಜ್ಞಾನದಿಂದ ಉಂಟಾದ ತಮಸ್ಸನ್ನು, ಅವರೆಲ್ಲರ ಹೃದಯಗಳಲ್ಲಿ ನೆಲೆಸಿರುವ ನಾನು, ಬೆಳಗುತ್ತಿರುವ ಜ್ಞಾನದೀಪದಿಂದ ನಾಶಮಾಡುತ್ತೇನೆ" (೧೦:೧೧).

**ಅನಂತದ ದ್ವಾರವಾಗಿ ಅವತಾರ :** ಅವತಾರದ ಮುಖ್ಯಕಾರ್ಯ ತನ್ನಲ್ಲಿ ನೆರವನ್ನು ಯಾಚಿಸುವವರಿಗೆ ಮುಕ್ತಿಯನ್ನು ದಯಪಾಲಿಸುವುದು ಎಂದು ಈಗಾಗಲೇ ನೋಡಿದ್ದೇವೆ. ಈ ದಿವ್ಯಕಾರ್ಯವನ್ನು ಸಮರ್ಥವಾಗಿ ಕೈಗೊಳ್ಳಲು, ಒಂದು ಕಡೆಯಿಂದ ಅವತಾರಪುರುಷನು ಪರಮತತ್ತ್ವದೆಡೆಗೆ ಸಾಗುವ ದ್ವಾರದ ಪಾತ್ರವನ್ನು ವಹಿಸಿಕೊಳ್ಳಬೇಕು; ಇನ್ನೊಂದೆಡೆ ಸಾಪೇಕ್ಷ ಜಗತ್ತಿನಲ್ಲಿ ಎಲ್ಲ ಜನರ ಕೈಗೆ ಎಟುಕುವಂತೆಯೂ ಇರಬೇಕು. ಅಂದರೆ, ಆತನು ನಿರಪೇಕ್ಷ ಮತ್ತು ಸಾಪೇಕ್ಷಗಳ ಅಥವಾ ಶ್ರೀರಾಮಕೃಷ್ಣರು ಹೇಳುವ ಹಾಗೆ ನಿತ್ಯ ಮತ್ತು ಲೀಲೆಗಳ ನಡುವಣ ಸ್ಥಾನದಲ್ಲಿ ನೆಲೆ ನಿಲ್ಲಬೇಕು. ತಮ್ಮ ಐಹಿಕ ಬಾಳುವೆಯ ಕಡೆಯ ದಿನಗಳಲ್ಲಿ ಅಭ್ಯಾಸ ವಶವಾಗಿಯೇ ಶ್ರೀರಾಮಕೃಷ್ಣರು ಈ ಗಡಿಯ ನೆಲೆಯಲ್ಲಿ ನೆಲೆಸಿದ್ದರು. ಈ ನೆಲೆಯನ್ನು ಅವರು **ಭಾವ** ಅಥವಾ **ಭಾವಮುಖ** ಎಂದು ಕರೆಯುತ್ತಿದ್ದರು.

ಅದ್ವೈತತತ್ತ್ವವಾದ ನಿರ್ಗುಣ ನಿರ್ವಿಶೇಷ ಪರಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಂಡ ಮೇಲೆ, ಅದೇ ಸ್ಥಿತಿಯಲ್ಲಿ ಶ್ರೀರಾಮಕೃಷ್ಣರು ಆರು ತಿಂಗಳುಗಳ ಕಾಲ ಇದ್ದರು. ಅನಂತರ ಅವರು ಸಾಮಾನ್ಯ ಪ್ರಜ್ಞೆಗೆ ಮರಳಿಬಂದರು ಹಾಗೂ ಸಗುಣ ಈಶ್ವರನ ಹಲವಾರು ರೂಪಗಳ ದರ್ಶನಗಳನ್ನು ಪಡೆಯುತ್ತ ಇದ್ದರು. ಅನಂತರ, ಜಗನ್ಮಾತೆಯು ಅವರಿಗೆ ದರ್ಶನವಿತ್ತು, ಈ ಆದೇಶವನ್ನು ನೀಡಿದಳು: **"ಭಾವದಲ್ಲಿ ಇರು."** ಸ್ವಾಮಿ ಶಾರದಾನಂದರು ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಲ್ಲಿ ಒಬ್ಬರು. ಅವರು ತಾವು ಬರೆದ 'ಶ್ರೀರಾಮಕೃಷ್ಣ ಲೀಲಾಪ್ರಸಂಗ'

**(ಪುಟ 27 ಕ್ಕೆ ಮುಂದುವರಿಯುವುದು)**

*With Best Compliments from*

# MYSORE DASAPRAKASH GROUP

**Hotel Paradise**
Yadavagiri, Mysore- 20
Ph: 0821 - 4008400, 2410366
hotelparadise@airtelmail.in

**Hotel Dasaprakash**
Gandhi Square, Mysore-1
Ph: 0821 - 2444455, 2442444
hoteldasaprakash@airtelmail.in

**DasaprakashTravels**
**For all Travel needs**
Mysore
Ph: 0821 -2514600, 4288984
www.mysoredasaprakashgroup.com


*With Best Wishes from:*

# VIVEKANANDA JNANAVAHINI KENDRA


Ponnampet Main Road,
Aruvathoklu , via Gonikoppal, Virajpet Taluk – S. Kodagu



**"Whatever you shall be in the future, will be the result of what you think and do now"**



SOUTH FACE



NORTH FACE

## ಕೈಲಾಸ ಮಾನಸ ಸರೋವರ ಯಾತ್ರೆ – ಸತ್ಸಂಗ ಪ್ರವಾಸ

ಜೂನ್, ಜುಲೈ ಮತ್ತು ಆಗಸ್ಟ್ 2012 – 19 ದಿನಗಳ ಪ್ರವಾಸ

ಪ್ರವಾಸದ ಸ್ಥಳಗಳು ಮುಕ್ತಿನಾಥ, ಕೈಲಾಸ ಮಾನಸ ಸರೋವರ,
ಹಾಗೂ ಕಠ್ಮಂಡು (ನೇಪಾಳ)

ಪ್ರವಾಸ ದರದಲ್ಲಿ 31 ಜನವರಿ 2012ರ ವರೆಗೆ ರೂ.5,000 ರಿಯಾಯಿತಿ ನೀಡಲಾಗುತ್ತದೆ.

ಪ್ರತಿ ಯಾತ್ರಿಕರಿಗೆ ಕರ್ನಾಟಕ ಸರ್ಕಾರದಿಂದ ರೂ.30,000 ಧನ ಸಹಾಯ

ಸಂಪರ್ಕಿಸಿ : 9741523713, 9880079588, 9886188867







## U.K. & Europe Tour – 14 Nights/15 Days

ಯು.ಕೆ. ಮತ್ತು ಯುರೋಪ್ ಪ್ರವಾಸ –14 ರಾತ್ರಿ ಮತ್ತು 15 ದಿನಗಳು


ಏಪ್ರಿಲ್, ಮೇ, ಜೂನ್ 2012 (ವಿಶೇಷ ರಿಯಾಯಿತಿ ದರದಲ್ಲಿ)

**10 ದೇಶಗಳು 18 ನಗರಗಳ ವೀಕ್ಷಣೆ**

ಬೆಂಗಳೂರಿನಿಂದ ಬೆಂಗಳೂರಿಗೆ ಪ್ರವಾಸದರದಲ್ಲಿ ಎಲ್ಲವೂ ಸೇರಿರುತ್ತದೆ.
(ವೀಸಾ ಚಾರ್ಜ್, ವಿಮಾನದರ, ತಿಂಡಿ, ಊಟ, ವಸತಿ
ಪ್ರವೇಶದರ ಮತ್ತು A/c ಬಸ್ಸಿನಲ್ಲಿ ಪ್ರಯಾಣ ಹಾಗೂ ಇತರೇ)

**ಕನ್ನಡ ಹಾಗೂ ಇಂಗ್ಲೀಷ್ ಮಾರ್ಗದರ್ಶಕರಿರುತ್ತಾರೆ**

ಸಂಪರ್ಕಿಸಿ : 9880079644, 9845100975



## 3 ದಿನಗಳ ಅಹೋಬಿಲಂ – ನವನರಸಿಂಹ ಪ್ರವಾಸ

ಪ್ರವಾಸ ಸ್ಥಳಗಳು: ಜ್ವಾಲಾನರಸಿಂಹ, ಪಾವನನರಸಿಂಹ, ವರಹಾನರಸಿಂಹ, ಕಾರಂಜಿನರಸಿಂಹ, ಮಾಲೋಲನರಸಿಂಹ, ಯೋಗನರಸಿಂಹ, ಭಾರ್ಗವನರಸಿಂಹ, ಛತ್ರವಟನರಸಿಂಹ, ಉಗ್ರನರಸಿಂಹ ಹಾಗೂ ಪ್ರಹ್ಲಾದವರದ ಶ್ರೀ ಲಕ್ಷ್ಮೀನರಸಿಂಹ (ಕೆಳಗಿನ ಅಹೋಬಿಲಂ)

ಸಂಪರ್ಕಿಸಿ : 9886188867, 9741012162

# ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್

# Orchid Travel & Tours


Recognised by Karnataka Tourism
Govt. of Karnataka

# 98, 1st Floor, D.V.G. Road, Basavanagudi, (Near Sai Gold Palace) Bangalore - 560 004.
E-mail : orchid.traveltours@gmail.com www.orchidtravels.net

**Tel : 26670646, 26621983, 26670647, 26617178**


ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ
ವಿವೇಕಪ್ರಭ
ರಾಮಕೃಷ್ಣ ಮಹಾಸಂಘದ ಏಕೈಕ ಕನ್ನಡ ಮಾಸಪತ್ರಿಕೆ
ವಿವೇಕಪ್ರಭ ಪತ್ರಿಕೆಯ ಮುಖ್ಯಾಂಶಗಳು
ಪ್ರಾರ್ಥನೆ; ಸೂಕ್ತಿಪ್ರಭ, ಸಂಪಾದಕೀಯ; ದಿವ್ಯತ್ರಯರ ಮತ್ತು ಇತರ ಸಂತರ ಶ್ರೇಷ್ಠ ವ್ಯಕ್ತಿಗಳ ಜೀವನ ಮತ್ತು ಬೋಧನೆಗಳು; ಪ್ರಶ್ನೋತ್ತರಗಳು; ಯುವಕರಿಗೆ ವಿಶೇಷ ಸಲಹೆ; ಧರ್ಮ, ದರ್ಶನ, ಮನಶ್ಶಾಸ್ತ್ರ, ವಿಜ್ಞಾನ, ಸಂಸ್ಕೃತಿ ಮುಂತಾದ ವಿಷಯಗಳಿಗೆ ಸಂಬಂಧಿಸಿದ ವೈಚಾರಿಕ ಲೇಖನಗಳು : ಸುದ್ದಿಸಂಚಯ, ಮಕ್ಕಳ ವಿಭಾಗ;
ಚಂದಾ ವಿವರ
ಬಿಡಿ ಪ್ರತಿ ರೂ. 10
ವಾರ್ಷಿಕ ರೂ. 100
ಮೂರು ವರ್ಷ ರೂ. 250
ಆಜೀವ(25ವರ್ಷ) ರೂ. 1500
ಪೋಷಕರು(25ವರ್ಷ) ರೂ. 3000 ಅಥವಾ ಹೆಚ್ಚು
ಇಂದೇ ಚಂದಾದಾರರಾಗಿರಿ
ಸಹಾಯಧನ ನೀಡುವ ಮೂಲಕ ಪೋಷಕರು ಅಥವಾ ಪತ್ರಿಕೆಯ ಆಜೀವ ಚಂದಾದಾರರಾಗಿ. ನಿಮ್ಮ ಸ್ನೇಹಿತರಿಗೆ ಅಥವಾ ಗ್ರಂಥಾಲಯಗಳಿಗೆ ಮತ್ತು ಇತರ ಸಂಸ್ಥೆಗಳಿಗೆ ಪತ್ರಿಕೆಯನ್ನು ಕೊಡುಗೆಯಾಗಿ ನೀಡಿ. ಪೋಷಕರ ಸಹಾಯಧನ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ
ರಾಮಕೃಷ್ಣ ಆಶ್ರಮದ ಹೆಸರಿನಲ್ಲಿ ನೀಡಿದ ಸಹಾಯಧನಕ್ಕೆ ಕಾಯಿದೆಯ 80-G ಅನ್ವಯ ಆದಾಯ ತೆರಿಗೆ ವಿನಾಯಿತಿ ಇರುತ್ತದೆ. ನಿಮ್ಮ ಚಂದಾ ಹಣವನ್ನು ಅಥವಾ ಪೋಷಕ ಸಹಾಯಧನವನ್ನು M.O. ಅಥವಾ Sri Ramakrishna Ashrama, Vivekaprabha A/C -
ಈ ಹೆಸರಿನಲ್ಲಿ ಡಿ.ಡಿ.ಮೂಲಕ ಕಳಿಸಿ.
ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
ಶ್ರೀರಾಮಕೃಷ್ಣ ಆಶ್ರಮ, ವಿವೇಕಪ್ರಭ ವಿಭಾಗ, ಯಾದವಗಿರಿ, ಮೈಸೂರು 570 020
e-mail : vivekaprabha@hotmail.com , kannada.vivekaprabha@gmail.com

## ‘ವಿವೇಕಪ್ರಭ’ ಪತ್ರಿಕೆಯ ಮಹದುದ್ದೇಶಗಳು




1. ಉನ್ನತ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಜನರಲ್ಲಿ ಹರಡುವುದು.
2. ಕೌಟುಂಬಿಕ ಮೌಲ್ಯಗಳನ್ನು ಪುನಃ ಸ್ಥಾಪಿಸುವುದು.
3. ನಮ್ಮ ಸಾಂಸ್ಕೃತಿಕ ನೆಲೆಯಲ್ಲಿ ಪುನಃ ನಮ್ಮ ಸಮಾಜವನ್ನು ಪ್ರತಿಷ್ಠಾಪಿಸುವುದು.
4. ನಮ್ಮ ವ್ಯಕ್ತಿತ್ವವನ್ನು ನೈತಿಕ ಮತ್ತು ಆಧ್ಯಾತ್ಮಿಕ ತಳಹದಿಯ ಮೇಲೆ ನಿರ್ಮಿಸುವುದು.
5. ಪರಸ್ಪರ ನಂಬಿಕೆ, ಪ್ರೀತಿ, ಸಹಾನುಭೂತಿ, ಸಹಬಾಳ್ವೆ ಇತ್ಯಾದಿ ಗುಣಗಳ ಅನಿವಾರ್ಯತೆಯನ್ನು ಒತ್ತಿ ಸಾರುವುದು.




## ‘ವಿವೇಕಪ್ರಭ’ ಪತ್ರಿಕೆಯ ಪ್ರಸಾರಕ್ಕೆ ನೀವೇನು ಮಾಡಬಹುದು?

1. ‘ವಿವೇಕಪ್ರಭ’ ದ ಆಜೀವ ಅಥವಾ ಪೋಷಕ ಚಂದಾದಾರರಾಗಿರಿ.
2. ಸುಮಾರು 5,000 ಶಾಲಾಕಾಲೇಜುಗಳಿಗೆ ‘ವಿವೇಕಪ್ರಭ’ ವನ್ನು ತಲುಪಿಸುವ ‘ವಿವೇಕದೀಕ್ಷೆ’ ಯೋಜನೆಗೆ ಉದಾರ ಧನಸಹಾಯ ಮಾಡಿರಿ.
3. ನಿಮ್ಮ ಬಂಧುಬಾಂಧವರಿಗೆ, ಸ್ನೇಹಿತರಿಗೆ ಮತ್ತು ಸುತ್ತಮುತ್ತಲ ಶೈಕ್ಷಣಿಕ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ‘ವಿವೇಕಪ್ರಭ’ ಪತ್ರಿಕೆಯ ಚಂದಾವನ್ನು ಮಾಡಿಸಿ.
4. ‘ವಿವೇಕಪ್ರಭ’ ಪತ್ರಿಕೆಗೆ ಹೆಚ್ಚು ಹೆಚ್ಚು ಜಾಹೀರಾತುಗಳನ್ನು ಸಂಗ್ರಹಿಸಿಕೊಡಿ.

**ಚಂದಾ ಕಳಿಸುವುದಕ್ಕೆ ಮತ್ತು ಚಂದಾ ಕೊಡುಗೆ ನೀಡಲು ಈ ಕೆಳಕಂಡ ಅರ್ಜಿಫಾರಂ ಉಪಯೋಗಿಸಿ.**

---

# ವಿವೇಕಪ್ರಭ

**ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ**

**ಶ್ರೀರಾಮಕೃಷ್ಣ ಆಶ್ರಮ, ವಿವೇಕಪ್ರಭ ಕಾರ್ಯಾಲಯ. ಯಾದವಗಿರಿ, ಮೈಸೂರು 570 020**

## ಚಂದಾ ಅರ್ಜಿ

ಮಾನ್ಯರೇ, (ನಿಮಗೆ ಸಂಬಂಧಿಸಿದ್ದನ್ನು ✓ ಮಾಡಿ)

☐ ನನ್ನನ್ನು / ಈ ಕೆಳಕಂಡ ಹೆಸರಿನವರನ್ನು 'ವಿವೇಕಪ್ರಭ' ಪತ್ರಿಕೆಯ ಚಂದಾದಾರರನ್ನಾಗಿ/ಪೋಷಕರನ್ನಾಗಿ ಮಾಡಬೇಕಾಗಿ ವಿನಂತಿ.

☐ ನನ್ನ/ ಕೆಳಕಂಡ ಹೆಸರಿನವರ ಚಂದಾವನ್ನು ನವೀಕರಿಸಬೇಕಾಗಿ ವಿನಂತಿ. **ಈಗಿನ ಚಂದಾಸಂಖ್ಯೆ**............................

**ನನ್ನ ವಿಳಾಸ**

ಹೆಸರು..........................................................................

ವಿಳಾಸ..........................................................................

.....................................................................................

.....................................................ಪಿನ್ .........................

**ಪತ್ರಿಕೆ ಪಡೆಯುವವರ ವಿಳಾಸ**

ಹೆಸರು..........................................................................

ವಿಳಾಸ..........................................................................

.....................................................................................

.....................................................ಪಿನ್ .........................

ಚಂದಾ ವಿವರ: (ನಿಮಗೆ ಸಂಬಂಧಿಸಿದ್ದನ್ನು ✓ ಮಾಡಿ)

| 1 ವರ್ಷದ ಚಂದಾ ₹ 100 | 3 ವರ್ಷದ ಚಂದಾ ₹ 250 | ಆಜೀವ ಚಂದಾ ₹ 1500 | ಪೋಷಕರ ಸಹಾಯಧನ ₹ 3000 |
|---|---|---|---|

**ಹಣವನ್ನು ಮನಿ ಆರ್ಡರ್ / ಡ್ರಾಫ್ಟ್ (ಶ್ರೀರಾಮಕೃಷ್ಣ ಆಶ್ರಮ, ವಿವೇಕಪ್ರಭ A/c ನ ಹೆಸರಿನಲ್ಲಿ) ಮೂಲಕ ಕಳುಹಿಸುತ್ತಿದ್ದೇನೆ.**

ವಿವರ..........................................................................................

1. ಹೊರ ಊರಿನ ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.
2. ವಿದೇಶಗಳಿಗೆ ಅನ್ವಯವಾಗುವ ಚಂದಾ ವಿವರಗಳಿಗೆ ಹಾಗೂ ಇತರ ವಿವರಗಳಿಗಾಗಿ ನಮಗೆ ಬರೆಯಿರಿ.

ಸಹಿ

ಎಂಬ ಉದ್ಗ್ರಂಥದಲ್ಲಿ ಇದರ ವಿಸ್ತೃತ ವಿವರಣೆಯನ್ನು ನೀಡಿದ್ದಾರೆ. ಅದು ಹೀಗಿದೆ: "ಪರತತ್ತ್ವದ ಸಗುಣ ಮತ್ತು ನಿರ್ಗುಣ ಆಯಾಮಗಳ ನಡುವೆ ಇರುವ ವಿಶ್ವ 'ಅಹಂ' ಅನ್ನೇ 'ಭಾವಮುಖ'ವೆಂದು ಕರೆಯುವುದು... ಈ ವಿಶ್ವ 'ಅಹಂ' ಎನ್ನುವುದೇ ಸೃಷ್ಟಿಕರ್ತನಾದ ಈಶ್ವರ ಅಥವಾ ಜಗನ್ಮಾತೆ. ಈ ಮಹಾನ್ ಅಹಂಕಾರದ ಸ್ವಭಾವವನ್ನು ವಿವರಿಸಹೊರಟ ಬಂಗಾಳದ ವೈಷ್ಣವ ಆಚಾರ್ಯರು ಅದನ್ನು ಭಗವಾನ್ ಶ್ರೀಕೃಷ್ಣ ಎಂದು ಕರೆದರು. ಆ ಕೃಷ್ಣನು ಪರಿಶುದ್ಧ ಚೈತನ್ಯದ ಮೂರ್ತಿವೆತ್ತ ರೂಪನಾಗಿದ್ದಾನೆ ಹಾಗೂ 'ಅಚಿಂತ್ಯ–ಭೇದಾಭೇದ'ದ (ಅಭೇದದಲ್ಲಿಯೂ ಗ್ರಹಿಸಲಾಗದ ಭೇದ– ಇದು ಗೌಡೀಯ ವೈಷ್ಣವರ ಸಿದ್ಧಾಂತ) ಸ್ವರೂಪವುಳ್ಳವನಾಗಿದ್ದಾನೆ."

ಶ್ರೀರಾಮಕೃಷ್ಣರು ಈ ವಿಶ್ವ 'ಅಹಂ' ನಲ್ಲಿ ತಾದಾತ್ಮ್ಯ ಹೊಂದಿದ್ದರು. ಇದನ್ನು ಅವರು 'ಪಕ್ವ ಅಹಂ' ಎಂದು ಕರೆಯುತ್ತಾರೆ. ಎಲ್ಲ ವ್ಯಕ್ತಿಗತ ಅಹಂಕಾರಗಳನ್ನು ಅಥವಾ 'ನಾನು'ಗಳನ್ನು ಅವರು 'ಅಪಕ್ವ ಅಹಂ' ಎಂದು ಹೆಸರಿಸುತ್ತಾರೆ. ಅವು ನೈಜವೂ ಪರಮಶ್ರೇಷ್ಠವೂ ಆದ 'ವಿಶ್ವ ಅಹಂ'ನ ಮಿಥ್ಯಾ ಅಭಿವ್ಯಕ್ತಿಗಳು. ಭಾವಮುಖದ ಸ್ಥಿತಿಯಲ್ಲಿ ಅವರಿಗೆ ಈ ಜಗತ್ತು, ಭಾವನೆಗಳ ಅಗಣಿತ ಅಲೆಗಳು ಮೇಲೆದ್ದು, ಉಕ್ಕಿಬಂದು ಲೀನವಾಗುವ 'ಮಹಾನ್ ಮನಸ್ಸಿನ' ಹಾಗೆ ಕಂಡುಬಂದಿತು.

ಪುರುಷ ಮತ್ತು ಬುದ್ಧಿಗಳ ನಡುವಣ ಅಂತರವನ್ನು ಸಾಕ್ಷಾತ್ಕಾರ ಮಾಡಿಕೊಂಡ ಯೋಗಿಗೆ ಸರ್ವವ್ಯಾಪಕತ್ವ ಮತ್ತು ಸರ್ವಶಕ್ತಿತ್ವಗಳು ಪ್ರಾಪ್ತವಾಗುವುದೆಂದು ಪತಂಜಲಿಯು ತನ್ನ ಯೋಗಸೂತ್ರಗಳಲ್ಲಿ ತಿಳಿಸುತ್ತಾನೆ. ಮಾನವಮಾತ್ರದವನಾದ ಒಬ್ಬ ಯೋಗಿಯ ವಿಷಯದಲ್ಲಿಯೇ ಇದು ಸತ್ಯವಾದರೆ, ಅವತಾರದಂತಹ ದಿವ್ಯಚೇತನಗಳ ವಿಷಯದಲ್ಲಿ ಇದು ಇನ್ನೆಷ್ಟು ನಿಜವಾಗಿದ್ದೀತು!

ಭಗವದ್ಗೀತೆಯ ಉದ್ದಕ್ಕೂ ಶ್ರೀಕೃಷ್ಣನನ್ನು 'ಭಗವಾನ್' ಎಂದೇ ಕರೆಯಲಾಗಿದೆ. ತಮ್ಮ ಗೀತಾಭಾಷ್ಯದ ಉಪೋದ್ಘಾತದಲ್ಲಿ ಶ್ರೀಶಂಕರಾಚಾರ್ಯರು, ವಿಷ್ಣುಪುರಾಣದ ಒಂದು ಶ್ಲೋಕವನ್ನು ಉದಹರಿಸುತ್ತಾರೆ:

**ಉತ್ಪತ್ತಿಂ ಪ್ರಲಯಂ ಚೈವ ಭೂತಾನಾಂ ಆಗತಂ ಗತಂ। ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನ್ ಇತಿ ॥**

"ಜಗತ್ತಿನ ಸೃಷ್ಟಿ ಮತ್ತು ಪ್ರಲಯ, ಜೀವಿಗಳ ಗಮನ ಮತ್ತು ನಿರ್ಗಮನ, ಅವರ ಜ್ಞಾನ ಮತ್ತು ಅಜ್ಞಾನ – ಇವುಗಳನ್ನು ಅರಿತಿರುವವನೇ 'ಭಗವಾನ್' ."

'ಭಗವಾನ್' ಎಂಬ ವಿಶೇಷಣವನ್ನು ಶ್ರೀರಾಮಕೃಷ್ಣರ ಹೆಸರಿನ ಹಿಂದೆ ಸೇರಿಸಿದ್ದು ಸ್ವಾಮಿ ವಿವೇಕಾನಂದರೇ. ಇದಲ್ಲದೆ ಅವರು ಸಂಸ್ಕೃತದಲ್ಲಿ ಶ್ರೀರಾಮಕೃಷ್ಣರಿಗೆ ಸಮರ್ಪಿತವಾದ ಸ್ತೋತ್ರವೊಂದನ್ನು ಕೂಡ ರಚಿಸಿದರು. ಅದರ ಪ್ರತಿಯೊಂದು ಸಾಲಿನ ಮೊದಲ ಅಕ್ಷರಗಳನ್ನು ಜೋಡಿಸಿ ಓದಿಕೊಂಡರೆ, **"ಓಂ ನಮೋ ಭಗವತೇ ರಾಮಕೃಷ್ಣಾಯ"** ಎಂಬ ಪ್ರಣಾಮಮಂತ್ರವಾಗುತ್ತದೆ. ಈ ಸ್ತೋತ್ರವು ದಿವ್ಯ ಗುರುವಿನೆಡೆಗೆ ಜೀವಿಯ ಸಂಪೂರ್ಣ ಶರಣಾಗತಿಯ ದ್ಯೋತಕವಾಗಿದೆ.

ಶ್ರೀರಾಮಕೃಷ್ಣರ ಸಂಬಂಧವಾಗಿ ಇರುವ ಇಡೀ ಆಚರಣಾಪದ್ಧತಿ, ಪೂಜಾಸಂಪ್ರದಾಯ ಮತ್ತು ಆರಾಧನೆಗಳು ರಾಮಕೃಷ್ಣ ಆಂದೋಲನವನ್ನು ಎಲ್ಲ ದೃಷ್ಟಿಯಿಂದಲೂ ಪೋಷಿಸುತ್ತಿರುವ ಮತ್ತು ಒಟ್ಟಿಗೆ ಹಿಡಿದಿಟ್ಟಿರುವ ಪ್ರಮುಖ ಆಧ್ಯಾತ್ಮಿಕ ಶಕ್ತಿಯಾಗಿದೆ. ಶ್ರೀರಾಮಕೃಷ್ಣರು ತಮ್ಮ ಉತ್ಕಟ ಆಧ್ಯಾತ್ಮಿಕ ಸಾಧನೆಗಳು ಮತ್ತು ಅನುಭವಗಳಿಂದ ವಿಮೋಚನೆಯ ಅಥವಾ ಮೋಕ್ಷದ ದ್ವಾರವನ್ನು ಎಲ್ಲರಿಗೂ ತೆರೆದಿಟ್ಟಿದ್ದಾರೆ ಹಾಗೂ ಅವರ ಅನುಗ್ರಹದಿಂದ ಯಾರು ಬೇಕಾದರೂ ಅದನ್ನು ಪಡೆಯಬಹುದು ಎನ್ನುವ ಶ್ರದ್ಧೆಯ ಆಧಾರದ ಮೇಲೆ ಇವೆಲ್ಲ ನಿಂತಿವೆ. ಬೈಬಲ್‌ನಲ್ಲಿ ಏಸುಕ್ರಿಸ್ತ, ತನ್ನನ್ನು ತಾನು 'ವಿಮೋಚನೆಯ ದ್ವಾರ'ವೆಂದು ಕರೆದುಕೊಳ್ಳುತ್ತಾನೆ. ಅವನು ಹೀಗೆ ಹೇಳುತ್ತಾನೆ: "ನಾನೇ ಬಾಗಿಲು; ನನ್ನ ಮೂಲಕ ಯಾವ ಮನುಷ್ಯ ಪ್ರವೇಶಿಸುತ್ತಾನೆಯೋ ಅವನು ರಕ್ಷಿಸಲ್ಪಡುತ್ತಾನೆ; ಹಾಗೂ ಒಳಗೂ ಹೊರಗೂ ಹೋಗಿಬರುತ್ತಾನೆ ಮತ್ತು ಹುಲ್ಲುಗಾವಲನ್ನು ಕಾಣುತ್ತಾನೆ."

ಅವತಾರದ ಪಾತ್ರದ ಬಗ್ಗೆ ಶ್ರೀರಾಮಕೃಷ್ಣರು ಕೂಡ ಇದೇ ತೆರನಾದ ಉದಾಹರಣೆಯನ್ನು ನೀಡುತ್ತಾರೆ: "ಒಬ್ಬ ಮನುಷ್ಯ ಗೋಡೆಯೊಂದರ ಬದಿಯಲ್ಲಿ ನಿಂತುಕೊಂಡಿದ್ದಾನೆ ಎಂದುಕೊಳ್ಳಿ. ಅದರ ಎರಡೂ ಕಡೆ ಸೀಮಾತೀತವಾಗಿ ವ್ಯಾಪಿಸಿರುವ ಬಯಲು ಹಬ್ಬಿದೆ. ಆ ಗೋಡೆಯಲ್ಲಿ ಒಂದು ರಂಧ್ರವಿದ್ದರೆ, ಅವನು ಆಚೆ ಕಡೆ ನೋಡಬಲ್ಲ... ಅವತಾರಪುರುಷರ ಮತ್ತು ಈಶ್ವರಕೋಟಿಗಳ 'ಅಹಂ' ಎನ್ನುವುದು ರಂಧ್ರವಿರುವ ಗೋಡೆಯ ಹಾಗೆ. ಅವರು ಗೋಡೆಯ ಇತ್ತ ಕಡೆ ಇದ್ದರೂ, ಇನ್ನೊಂದು ಕಡೆ ಇರುವ ವಿಶಾಲ ಬಯಲನ್ನು ನೋಡಬಲ್ಲರು. ಅಂದರೆ, ಮಾನವ ಶರೀರವನ್ನು ಹೊಂದಿದ್ದರೂ, ಭಗವಂತನಲ್ಲಿ ಅವರು ಒಂದಾಗಿರುತ್ತಾರೆ... ಆ ರಂಧ್ರ ಸಾಕಷ್ಟು ದೊಡ್ಡದಿದ್ದರೆ, ಅದರ ಮೂಲಕ ಸಾಗಿಹೋಗಿ, ಮತ್ತೆ ಮರಳಿಯೂ ಅವರು ಬರಬಲ್ಲರು."

ಶ್ರೀರಾಮಕೃಷ್ಣರು ಈ ಉಪಮೆಯಲ್ಲಿ ತಮ್ಮ ಸ್ವಂತ ಜೀವನದ ಬಗ್ಗೆಯೇ ಹೇಳುತ್ತಿದ್ದಾರೆ ಎನ್ನುವುದು ಸ್ಪಷ್ಟ. ಮತ್ತೊಂದು ಸಂದರ್ಭದಲ್ಲಿ, ಇದೇ ನಿದರ್ಶನವನ್ನು ನೀಡಿದ ಬಳಿಕ ಅವರು ಶಿಷ್ಯನೊಬ್ಬನನ್ನು,"ಆ ರಂಧ್ರ ಯಾವುದು ಎಂದು ಹೇಳುತ್ತೀಯೇನು?" ಎಂದು ಕೇಳಿದರು. ಅದಕ್ಕೆ ಆ ಶಿಷ್ಯ ಹೀಗೆ ಉತ್ತರಿಸಿದ: "ನೀವೇ ಆ ರಂಧ್ರ." ಇದನ್ನು ಕೇಳಿ ಶ್ರೀರಾಮಕೃಷ್ಣರಿಗೆ ಆನಂದವಾಯಿತು.